Cement Factory near Honnali. (Steps to start.)

Q.—660—Sri B. MADHAVACHAR (Bhadravati).—

Will the Government be pleased to state :—

Whether they have received any representation to examine the possibilities of starting a Cement Factory near Honnali ?

A—Dr. R. NAGAN GOWDA (Minister for Industries and Excise).—

Yes.

ಶ್ರೀ ಬಿ. ಮಾಧವಾಚಾರ್.—ತಮಗೆ ಈ ಮನವಿ ಬಂದ ಮೇಲೆ ತಾವೇನು ಕಾರ್ಯ ಕ್ರಮಗಳನ್ನು ಕೈಗೊಂಡಿದ್ದೀರಿ ?

*ಡಾ॥ ಆರ್. ನಾಗನಗೌಡ.—ಈ ವಿಚಾರದಲ್ಲಿ ಹೊನ್ನಾಳಿ ತಾಲ್ಲೂಕಿನಲ್ಲಿ ಸರಿಯಾದಂಥ ಲೈಂಸ್ಟೋನ್ ಗಣಿಗಳು ಎಷ್ಟಿರುತ್ತವೆಂದು ಕೇಳಿದ್ದುದಕ್ಕೆ ಕೇವಲ ಕೆಲವೇ ಕೆಲವು ಇರುತ್ತವೆಂದು ನಮಗೆ ತಿಳಿದು ಬಂದಿದೆ. ನಮಗೆ ಈ ಫ್ಯಾಕ್ಟರಿ ಹಾಕಲು ಎಷ್ಟು ಪ್ರಮಾಣದ ಲೈಂಸ್ಟೋನ್ ಬೇಕಾಗುತ್ತದೆಂಬುದರ ಬಗ್ಗೆ ಒಂದು ವರದಿಯನ್ನು ಕೇಳಿದ್ದೇವೆ.

ಶ್ರೀ ಬಿ. ಮಾಧವಾಚಾರ್.—ಹಾಗಾದರೆ ಆ ಹೊನ್ನಾಳಿ ತಾಲ್ಲೂಕಿನಲ್ಲಿ ಸಾಕಷ್ಟು ಲೈಂಸ್ಟೋನ್ ಇಲ್ಲವೆಂದು ಹೇಳುತ್ತೀರಾ ?

*ಡಾ॥ ಆರ್. ನಾಗನಗೌಡ.—ಹೊನ್ನಾಳಿ ತಾಲ್ಲೂಕಿನಲ್ಲಿ ಕೆಲವು ಕಡೆ ಈ ವಸ್ತು ದೊರೆಯುತ್ತದೆ. ಅಲ್ಲದೆ ಆಜುಬಾಜು ಪ್ರದೇಶಗಳಲ್ಲಿ ಎಂದರೆ ಕುಂಸಿ, ಬಿಕ್ಕೋನಹಳ್ಳಿ, ಜೋಳದಹಾಳ್ ಇತ್ಯಾದಿ ಕೆಲವು ಸ್ಥಳಗಳಲ್ಲೂ ದೊರೆಯುವುದಾಗಿ ವರದಿಯಲ್ಲಿ ಸೂಚಿಸಿದ್ದಾರೆ.

ಶ್ರೀ ಬಿ. ಮಾಧವಾಚಾರ್.—ಹೊನ್ನಾಳಿಗೆ ಸಮೀಪದಲ್ಲಿರುವ ಹೀರೆಕೆರೂರು ತಾಲ್ಲೂಕು ಧಾರವಾಡ ಜಿಲ್ಲೆಯ ಈ ಸ್ಥಳದಲ್ಲಿ ಹೇರಳವಾಗಿ ಆ ಸಾಮಾನು ದೊರೆಯುತ್ತದೆಂಬ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೆ ?

ಡಾ॥ ಆರ್. ನಾಗನಗೌಡ —ನವೆಂಬರು ತಿಂಗಳು ಕಳೆದ ತರುವಾಯ ಆ ವಿಚಾರವನ್ನು ಪರ್ಯಾಲೋಚನೆ ಮಾಡಿ ನೋಡುತ್ತೇವೆ.

Sugar Factory at Maddur (Steps taken to start)

Q.—694. Sri M. CHIKKALINGIAH (Malavalli—Scheduled Castes).—

Will the Government be pleased to state :—

(*a*) whether it is not a fact that there have been a number of representations before Government to start a sugar factory at Maddur;

(*b*) whether it is not a fact that an Hon'ble Minister had called for a special meeting at Maddur to get the opinion of the Members and statistics to start a sugar factory;

(*c*) the further action taken in the matter ?

A.—Dr. R. NAGAN GOWDA (Minister for Industries and Excise).—

(*a*) Yes.

(*b*) Yes.

(*c*) After considering the acreage of cane area in the locality which is not adequate for the purpose and in view of the fact that a factory is already coming up at Pandavapura on co-operative auspices, Government have decided to defer consideration of the matter till the Pandavapura Factory gets going.

ಶ್ರೀ ಎಂ. ಚಿಕ್ಕಲಿಂಗಯ್ಯ.—ಜಮೀನು ಸಾಲದೆಂಬ ಕಾರಣದ ಮೇಲೆ ಈ ವಿಚಾರವನ್ನು ಮುಂದಕ್ಕೆ ಹಾಕಲಾಗಿದೆ ಎಂದು ತಿಳಿಸೋಣವಾಗಿದೆ. ಎಷ್ಟು ಎಕರೆ ಕಬ್ಬು ಬೆಳೆಯುವ ಪ್ರದೇಶವಿದ್ದರೆ ತಾವು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಅನುಮತಿ ಕೊಡುತ್ತೀರಿ?

*ಡಾ॥ ಆರ್. ನಾಗನಗೌಡ.—ಅದರ ವಿಚಾರ ತಮಗೇ ಗೊತ್ತಿದೆ. ಒಂದು ದಿವಸಕ್ಕೆ ಸುಮಾರು ಒಂದು ಸಾವಿರದ್ಯೈನೂರು ಟಿ೯ ಮೇಲೆ ಕ್ರಷ್ ಮಾಡಲು ಅವಕಾಶವಿರಬೇಕು. 20 ದಿವಸಗಳು ಕಾರ್ಖಾನೆ ಕೆಲಸ ಮಾಡಲು ಸುಮಾರು ಎರಡು ಲಕ್ಷ ಟಿ೯ಗಳಿಗೆ ಮೇಲ್ಪಟ್ಟು ಕಬ್ಬಿನ ಸರಬರಾಯಿ ಆಗಬೇಕು. ಅಷ್ಟು ಪ್ರಮಾಣದಲ್ಲಿ ಕಬ್ಬನ್ನು ಬೆಳೆಯತಕ್ಕ ಪ್ರದೇಶವಿರಬೇಕಾದದ್ದು ಅಗತ್ಯ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮದ್ದೂರು, ಮಂಡ್ಯ, ಚೆನ್ನಪಟ್ಟಣ ಮತ್ತು ಪಾಂಡವಪುರ ಈ ನಾಲ್ಕು ತಾಲ್ಲೂಕುಗಳಲ್ಲೂ ಸುಮಾರು 10 ಸಾವಿರ ಎಕರೆಗಳಿಗಿಂತಲೂ ಹೆಚ್ಚು ಪ್ರದೇಶದಲ್ಲಿ ಕಬ್ಬನ್ನು ಬೆಳೆಯುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಆ ವಿಚಾರ ಗೊತ್ತಿದೆ. ಆದರೆ ಮದ್ದೂರು ಮತ್ತು ಚನ್ನಪಟ್ಟಣ ಮಳವಳ್ಳಿ ತಾಲ್ಲೂಕುಗಳಲ್ಲಿ ಚೈಲ್ ಎಂಡ್ ಆಪ್ ದಿ ಕೆನಾಲ್‌ನ ಜಮೀನುಗಳಿಗೆ ನೀರು ಸರಬರಾಯಿ ಆಗತಕ್ಕ ವಿಚಾರದಲ್ಲಿ ಬಹಳ ಅನುಮಾನವಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಪ್ರತಿ ದಿನವೂ ಈ ಸ್ಥಳಗಳಿಂದ ಸಾವಿರಾರು ಟಿ೯ ಕಬ್ಬು ಮಂಡ್ಯ ಕಾರ್ಖಾನೆಗೆ ಸರಬರಾಯಿಯಾಗುತ್ತಿರುವ ವಿಚಾರ ತಮ್ಮ ಗಮನಕ್ಕೆ ಬಂದಿಲ್ಲವೇ ?

ಡಾ॥ ಆರ್. ನಾಗನಗೌಡ.—ಈಗ ಸುಮಾರು ಆ ಕಬ್ಬು ಬೆಳೆಯುವ ಪ್ರದೇಶ ಸುಮಾರು ಒಂದು ಸಾವಿರದ ನೂರಹದಿನೈದು ಎಕರೆಗಳೆಂದು ತಿಳಿದು ಬಂದಿದೆ. ಮತ್ತೊಂದು ಕಾರ್ಖಾನೆಯನ್ನು ಪ್ರಾರಂಭಿಸಬೇಕಾಗಿದ್ದರೆ ಕನಿಷ್ಠ ಪಕ್ಷ 15—16 ಸಾವಿರ ಎಕರೆಗಳಷ್ಟು ಪ್ರದೇಶದಲ್ಲಿ ಕಬ್ಬಿನ ಬೆಳೆ ಇರಬೇಕಾಗುತ್ತದೆ. ಈಗ ಇರತಕ್ಕ ಒಟ್ಟು ಪ್ರದೇಶ ಕಬ್ಬು ಬೆಳೆಯುವುದು 10 ವರ್ಷಗಳ ದಾಮಾಷಾ ಪ್ರಕಾರ ನೋಡಿದಲ್ಲಿ ಮಂಡ್ಯ-ಮದ್ದೂರು ಪಾಂಡವಪುರ ಇತ್ಯಾದಿ ಸ್ಥಳಗಳಲ್ಲಿ ಕೇವಲ 16 ಸಾವಿರ ಎಕರೆಗಳೆಂದು ಗೊತ್ತಾಗಿದೆ. ಇಷ್ಟು ಪ್ರದೇಶದಲ್ಲಿ ಬೆಳೆಯುವ ಕಬ್ಬಿಗೋಸ್ಕರ

(ಡಾ॥ ಆರ್. ನಾಗನಗೌಡ.)

ವಾಗಿ ಮಂಡ್ಯ ಮತ್ತು ಪಾಂಡವಪುರ ಈ ಎರಡು ಕಡೆಗಳಲ್ಲಿ ಫ್ಯಾಕ್ಟರಿಯನ್ನು ತೆರೆಯಬೇಕಾಗಿದೆ. ಮಂಡ್ಯದಲ್ಲಿ ಈಗಾಗಲೇ ಒಂದು ದೊಡ್ಡ ಫ್ಯಾಕ್ಟರಿ ಕೆಲಸ ಮಾಡುತ್ತಿರುವುದು ಎಲ್ಲರಿಗೂ ತಿಳಿದಿದ್ದೇ ಆಗಿದೆ. ಈ ಫ್ಯಾಕ್ಟರಿಯು ನಿರಂತರವಾಗಿ ಕೆಲಸ ಮಾಡಿಕೊಂಡು ಹೋಗಲು ಸಾಕಷ್ಟು ವಿಸ್ತೀರ್ಣದಲ್ಲಿ ಕಬ್ಬು ಬೆಳೆಯಲಾಗುತ್ತದೆಯೇ ಎಂಬುದನ್ನು ನೋಡಿ ಕೊಳ್ಳಬೇಕಾಗಿದೆ. ಇದೆಲ್ಲವನ್ನೂ ಆಲೋಚನೆ ಮಾಡಿ ಕೆಲಸ ಮಾಡಬೇಕಾಗಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಹಾಲ ಮದ್ದೂರಿ ನಿಂದ ಮಂಡ್ಯ ಸಕ್ಕರೆ ಕಾರ್ಖಾನೆಗೆ ಸರಬರಾಯಿ ಆಗುತ್ತಿರುವ ಕಬ್ಬಿನ ಪ್ರಮಾಣವನ್ನು ಕಡಿಮೆ ಮಾಡಿ ಅನಂತರ ಅಲ್ಲಿ ಉಳಿಯುತ್ತಿರುವ ತಕ್ಕ ಕಬ್ಬಿಗೋಸ್ಕರ ವಾಗಿ ಮದ್ದೂರಿನಲ್ಲಿ ಒಂದು ಅಡಿಷನಲ್ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಬೇಕೆಂಬುದಾಗಿ ಅಲ್ಲವೇ ತಾವು ಮೊದಲು ಪ್ಲಾನು ತಯಾರಿಸಿದ್ದು ? ಮಂಡ್ಯ ಸಕ್ಕರೆ ಕಾರ್ಖಾನೆಯ ಒಂದು ಬ್ರ್ಯಾಂಚನ್ನು ಮದ್ದೂರಿನಲ್ಲಿ ತೆರೆಯಬೇಕೆಂಬ ಉದ್ದೇಶದಿಂದಲ್ಲವೇ ಆ ಪ್ಲಾನನ್ನು ತರಿಸಿಕೊಂಡಿದ್ದು ?

ಡಾ॥ ಆರ್. ನಾಗನಗೌಡ.—ಮದ್ದೂರಿನಲ್ಲಿ ಒಂದು ಪ್ರತ್ಯೇಕವಾದ ಫ್ಯಾಕ್ಟರಿಯನ್ನೇ ಪ್ರಾರಂಭಿಸಬೇಕೆಂದು ಮಾಡಿದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಪಾಂಡವಪುರದ ಫ್ಯಾಕ್ಟರಿ ವಿಚಾರ ಯಾವ ಸ್ಟೇಜಿನಲ್ಲಿದೆ ?

ಡಾ॥ ಆರ್. ನಾಗನಗೌಡ.—ಅದರ ಕೆಲಸ ಬಹಳ ತ್ವರಿತವಾಗಿ ನಡೆಯುತ್ತಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅಲ್ಲಿ ಬಹಳ ಜಿಪ್ಸಾಸೆಯಿಂದ ಕೆಲಸ ಚುರುಕಾಗಿ ನಡೆಯದೆ ಬಹಳ ನಿಧಾನವಾಗಿ ಕೆಲಸ ಆಗುತ್ತದೆಯಲ್ಲವೇ ?

ಡಾ॥. ಆರ್ ನಾಗನಗೌಡ.—ಹಾಗೇನೂ ಇಲ್ಲ. ಸರ್ಕಾರ ಸ್ಟೆಪ್ಸ್ ತೆಗೆದುಕೊಂಡಿದೆ; ಕೊಡತಕ್ಕ ಗ್ಯಾರಂಟಿ ಮೊಬಲಗನ್ನು ಸಹ ಕೊಡಲಾಗಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆ ಫ್ಯಾಕ್ಟರಿ ಆದ ಮೇಲಾದರೂ ಈ 3—4 ತಾಲ್ಲೂಕುಗಳು ಬಹಳ ಮುಖ್ಯವಾಗಿ ಕಬ್ಬನ್ನು ಬೆಳೆಯುತ್ತಿರುವ ಪ್ರದೇಶಗಳಲ್ಲಿರುವುದರಿಂದ ಈ ಮದ್ದೂರಿನ ಫ್ಯಾಕ್ಟರಿ ವಿಚಾರವನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುವಿರಾ ?

ಡಾ॥ ಆರ್. ನಾಗನಗೌಡ.—ಮದ್ದೂರಿನಲ್ಲಿ ಒಂದು ಪ್ರತ್ಯೇಕ ಫ್ಯಾಕ್ಟರಿಯನ್ನು ತೆರೆಯುವ ವಿಚಾರದಲ್ಲಿ ಏನು ತೊಂದರೆಗಳಿವೆ ಎಂಬುದನ್ನು ಪರಿಶೀಲನೆ ಮಾಡಬೇಕು.

ಶ್ರೀ ಎಚ್. ಕೆ. ವೀರಣ್ಣಗೌಡ.—ಈಗ ಹಾಲ ಮದ್ದೂರಿನಿಂದ ಪ್ರತಿದಿನವೂ ಆ ಮಂಡ್ಯ ಫ್ಯಾಕ್ಟರಿಗೆ ಎಷ್ಟು ಸಾವಿರ ಟನ್ ಕಬ್ಬು ಸರಬರಾಯಿ ಆಗುತ್ತದೆಯೆಂಬುದನ್ನು ತಾವು ತಿಳಿಸುತ್ತೀರಾ ?

ಡಾ॥ ಆರ್. ನಾಗನಗೌಡ.—ಅಲ್ಲಿ ಕಬ್ಬು ಬೆಳೆಯತಕ್ಕ ಪ್ರದೇಶ 1,500 ಎಕರೆಗಳಿದೆಯೆಂದು ತಿಳಿಸಿರುತ್ತಾರೆ. ಆದರೆ ಅಲ್ಲಿಂದ ಮಂಡ್ಯ ಫ್ಯಾಕ್ಟರಿಗೆ ಪ್ರತಿದಿನವೂ ಎಷ್ಟು ಟನ್ ಕಬ್ಬು ಹೋಗುತ್ತಿದೆಯೆಂಬ ಅಂಕಿಗಳು ಈಗ ನಮ್ಮಲ್ಲಿ ನನ್ನ್ಲಿರುವುದಿಲ್ಲ.

ಶ್ರೀ ಎಚ್. ಕೆ. ವೀರಣ್ಣಗೌಡ.—ಪಾಂಡವಪುರ, ಮದ್ದೂರು, ಮಂಡ್ಯ ಈ ಮೂರು ಸೆಕ್ಷನ್‌ಗಳಿಂದಲೂ ಮಂಡ್ಯ ಸಕ್ಕರೆ ಕಾರ್ಖಾನೆಗೆ ಸರಬರಾಯಿಯಾಗುತ್ತಿರುವ ಕಬ್ಬಿನ ಪ್ರಮಾಣದಲ್ಲಿ ಮದ್ದೂರಿನಿಂದ ಸರಬರಾಯಿಯಾಗುತ್ತಿರುವ ಕಬ್ಬಿನ ಪ್ರಮಾಣವೇ ಬಹಳ ಜಾಸ್ತಿಯಾಗಿರುತ್ತದೆ ಎನ್ನುವುದಾದರೂ ತಮಗೆ ಗೊತ್ತಿದೆಯೇ ?

ಡಾ॥ ಆರ್. ನಾಗನಗೌಡ.—ಆ ಅಂಕಿ ಅಂಶಗಳನ್ನೆಲ್ಲಾ ತರಿಸಬೇಕಾಗಿದೆ. ಅವುಗಳನ್ನು ಕಳುಹಿಸಿಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿತ್ತೇವೆ. ಈಗ ಹಾಲಿ ಮಂಡ್ಯ ಮತ್ತು ಪಾಂಡವಪುರ ತಾಲ್ಲೂಕುಗಳಲ್ಲಿ ಕಬ್ಬು ಬೆಳೆಯುವ ಪ್ರದೇಶ ಎಷ್ಟಿದೆ ಎಂಬುದನ್ನು ತಿಳಿದು ಕೊಳ್ಳಬೇಕು. ಅನಂತರ ಈ ಪ್ರದೇಶದಲ್ಲಿ ಮೂರು ಫ್ಯಾಕ್ಟರಿಗಳನ್ನು ಹಾಕಲು ಅವಕಾಶವಿದೆಯೇ ಎಂಬುವುದನ್ನು ಪರಿಶೀಲನೆ ಮಾಡಬೇಕಾಗಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಮಂಡ್ಯ ಫ್ಯಾಕ್ಟರಿಗೆ ಕಬ್ಬನ್ನು ಸರಬರಾಯಿ ಮಾಡುತ್ತಿರುವ ಮಂಡ್ಯ ಜಿಲ್ಲೆಯ ರೈತರಿಗೆ ಎಷ್ಟು ಪ್ರದೇಶಕ್ಕಿಂತ ಹೆಚ್ಚು ಪ್ರದೇಶದಲ್ಲಿ ಕಬ್ಬನ್ನು ಬೆಳೆಯಕೂಡದೆಂದು ನಿರ್ಬಂಧ ಹಾಕಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—ಮದ್ದೂರು-ಮಂಡ್ಯ ಮತ್ತು ಇನ್ನೂ ಅನೇಕ ಇತರ ಸ್ಥಳಗಳಲ್ಲಿ ಕಬ್ಬು ಬೆಳೆಯತಕ್ಕ ಪ್ರದೇಶವಿದೆ. ಆ ಜಮೀನುಗಳಿಗೆಲ್ಲ ನೀರಿನ ಸರಬರಾಯಿ ವ್ಯವಸ್ಥೆ ಎಷ್ಟರಮಟ್ಟಿಗಿದೆಯೆಂಬುದನ್ನು ಕೂಡ ನಾವೀಗ ಆಲೋಚನೆ ಮಾಡಬೇಕು. ಆದರೆ ನಾನೇನೂ ಆ ಮದ್ದೂರಿನ ವಿಚಾರವನ್ನು ಕೈಬಿಟ್ಟಿಲ್ಲ. ಅಂಕಿ ಅಂಶಗಳನ್ನು ತರಿಸಿ ಪ್ರತಿಯೊಂದು ಬಾಬನ್ನೂ ಕೂಲಂಕಷವಾಗಿ ವಿಚಾರ ಮಾಡಿ ನೋಡಬೇಕಾದದ್ದು ಯುಕ್ತವೆಂತ ತೀರ್ಮಾನಮಾಡಿಕೊಂಡಿದ್ದೇವೆ. ಆ ಬಗ್ಗೆ ನಮಗೆ ಅಗತ್ಯವಾಗಿ ಬೇಕಾಗಿರತಕ್ಕ ಪ್ರತಿಯೊಂದು ಫ್ಯಾಕ್ಟ್‌ನ್ನೂ ಫಿಗರ್ಸ್‌ನ್ನೂ ತರಿಸಿಕೊಳ್ಳುತ್ತಿದ್ದೇವೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ತಾವಿಲ್ಲಿ ಒದಗಿಸಿರತಕ್ಕ ಉತ್ತರದಲ್ಲಿ "Government have decided" ಎಂಬುದಾಗಿ ಹೇಳಿದ್ದೀರಿ. ಈಗ ತಾವು ಬಾಯಿಮಾತಿನಲ್ಲೊಂದು ರೀತಿಯಾಗಿ ಹೇಳುತ್ತಿದ್ದೀರಿ. ಈ ಎರಡರಲ್ಲಿ ನರಿಯಾದ ಉತ್ತರ ಯಾವುದೆಂದು ನಾವು ತಿಳಿಯಬೇಕು ?

ಡಾ॥ ಆರ್. ನಾಗನಗೌಡ.—ಈಗ ಸ್ಥಾಪಿಸಬೇಕೆಂದಿರುವ ಫ್ಯಾಕ್ಟರಿ ಒಂದು ಪರ್ಮನೆಂಟ್ ಆರ್ಡರಿಗೆ ಬಂದನಂತರ ಈಗ ನಾನು ತಿಳಿಸಿರತಕ್ಕ ಅಂಕಿಅಂಶಗಳನ್ನೆಲ್ಲಾ ತರಿಸಿಕೊಂಡು ಆಲೋಚನೆ ಮಾಡುವುದಕ್ಕೆ ಸುಲಭವಾಗುತ್ತದೆಂಬ ಭಾವನೆಯಿಂದ ಹಾಗೆ ತಿಳಿಸಲಾಗಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಪಾಂಡವಪುರದಲ್ಲೊಂದು ಫ್ಯಾಕ್ಟರಿಯನ್ನು ತೆರೆಯುವುದಕ್ಕೂ ಮದ್ದೂರಿನಲ್ಲಿ ಸ್ಥಾಪಿಸಬೇಕೆಂದು ಕೇಳತಕ್ಕ ಫ್ಯಾಕ್ಟರಿಗೂ ಯಾವ ಸಂಬಂಧವೂ ಇಲ್ಲವೆನ್ನುವುದು ತಮಗೆ ಗೊತ್ತಿದೆಯೇ ?

ಡಾ॥ ಆರ್. ನಾಗನಗೌಡ.—ಈಗ ಮದ್ದೂರಿನಿಂದ ಮಂಡ್ಯಕ್ಕೆ ಬರುತ್ತಿರುವ ಕಬ್ಬು ಸಾಕಷ್ಟು ಪ್ರಮಾಣದಲ್ಲಿ ಸರಬರಾಯಿಯಾಗುತ್ತಿದೆಯೇ ಎಂಬುದನ್ನು ಇದರಿಂದ ಅಲ್ಲೇ ಒಂದು ಪ್ರತ್ಯೇಕವಾದ ಫ್ಯಾಕ್ಟರಿಯನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆಯೇ ಎಂಬ ವಿಚಾರಗಳನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆಮಾಡ

ಬೇಕಾಗಿದೆ. ಅದಕ್ಕಾಗಿ ಅಗತ್ಯವಾದ ಎಲ್ಲ ಅಂಕಿ ಅಂಶಗಳನ್ನು ಕಳುಹಿಸಿ ಕೊಡುವಂತೆ ಕೇಳಲಾಗಿದೆ. ಆ ಅಂಕೀ ಅಂಶಗಳೆಲ್ಲಾ ಬಂದತರುವಾಯ ನೋಡೋಣ. ಸೂಕ್ತಾಸೂಕ್ತತೆ ಗಳಿಗನುಸಾರವಾಗಿ ತೀರ್ಮಾನ ಮಾಡೋಣ.

ಶ್ರೀ ಎಚ್. ಕೆ. ವೀರಣ್ಣಗೌಡ.—ತಾವು ಹೇಳುತ್ತಿರುವ ಮಂಡ್ಯ ಫ್ಯಾಕ್ಟರಿಗೂ ಪಾಂಡವಪುರದಲ್ಲಿ ಪ್ರಾರಂಭಿಸುವ ಫ್ಯಾಕ್ಟರಿಗೂ ಮತ್ತು ಈಗ ಮದ್ದೂರಿನಲ್ಲಿ ಸ್ಥಾಪಿಸಬೇಕೆಂದು ಕೇಳುತ್ತಿರುವ ಫ್ಯಾಕ್ಟರಿಗೂ ಒಂದಕ್ಕೊಂದಕ್ಕೂ ಏನು ಸಂಬಂಧವಿದೆ ?

ಡಾ॥ ಆರ್. ನಾಗನಗೌಡ.—ನೀರಾವರಿ ಕಾಂಗಾರಿಗಳ ಚೀಫ್ ಇಂಜಿನಿಯರ್ ಅವರು ನೀರುಸರಬರಾಯಿ ಆಗತಕ್ಕ ವಿಚಾರದಲ್ಲಿ ಬೇರೆ ರೀತಿಯಾಗಿ ಅಭಿಪ್ರಾಯಪಟ್ಟಿದ್ದಾರೆ. ಆದಕಾರಣ ನಾನೀಗ ಯಾವ ತೀರ್ಮಾನ ತೆಗೆದುಕೊಳ್ಳುವುದಕ್ಕೂ ಬಹಳ ಕಷ್ಟವಾಗಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಸೋಮನಹಳ್ಳಿ, ತಾಯಲೂರು ಇತ್ಯಾದಿ ಸ್ಥಳಗಳಲ್ಲಿ ಸುಮಾರು 2,000 ಎಕರೆಗಳಿಗಿಂತಲೂ ಕಬ್ಬು ಬೆಳೆಯುವ ಪ್ರದೇಶವಿದೆಯೆಂಬ ಅಂಶ ತಮ್ಮ ಅವಗಾಹನೆಗೆ ಬಂದಿದೆಯೇ ?

Dr. R. NAGAN GOWDA.—I take that information from the Hon'ble Member.

ಶ್ರೀ ಎಚ್. ಕೆ. ವೀರಣ್ಣಗೌಡ.—ಮಂಡ್ಯ, ಮಳವಳ್ಳಿ ಮದ್ದೂರು ಚನ್ನಪಟ್ಟಣ ಈ ಸ್ಥಳಗಳಲ್ಲಿ ಬೆಳೆಯುತ್ತಿರುವ ಕಬ್ಬಿನ ಬೆಳೆಯ ವಿಚಾರದಲ್ಲಿ ಚೀಫ್ ಇಂಜಿನಿಯರ್ ಅವರು ನೀರಿನ ವಿಚಾರದಲ್ಲಿ ಕೊಟ್ಟಿರತಕ್ಕ ಅಭಿಪ್ರಾಯ ಸರಿಯಾದದ್ದಲ್ಲ ಎಂದು ಹೇಳಿದರೆ ಅದನ್ನು ತಾವು ಒಪ್ಪಿಕೊಳ್ಳುತ್ತೀರಾ ?

ಡಾ॥ ಆರ್. ನಾಗನಗೌಡ.—ತಾವೀಗ ಕೊಟ್ಟಿರತಕ್ಕ ವಿಚಾರವ ಪ್ರಕಾರ again I will ask him to re-examine the whole thing. ಇನ್ನು ಮೊನ್ನೆ ತಾನೇ ಕಳೆದ ಫೆಬ್ರವರಿ ತಿಂಗಳಲ್ಲಿ ಅಲ್ಲಿ ಒಂದು ಮೀಟಿಂಗ್ ನಡೆಯಿತು. If you kindly permit, my colleague who presided over the meeting wants to say something.

ಶ್ರೀ ಎಚ್. ಕೆ. ವೀರಣ್ಣಗೌಡ.—ಎಲ್ಲಿ ನೀರಿಗೆ ಅಭಾವ ಹೆಚ್ಚಾಗಿದೆಯೋ ಅಂಥ ಗೋರಿಬಿದನೂರು ತಾಲ್ಲೂಕಿನಲ್ಲೇ ಲಿಫ್ಟ್ ಇರಿಗೇಷನ್ ಮೂಲಕ ಕಬ್ಬನ್ನು ಬೆಳೆಯುತ್ತಿರುವ ಪ್ರದೇಶದಲ್ಲಿ ಒಂದು ಫ್ಯಾಕ್ಟರಿಯನ್ನು ಹಾಕುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿಲ್ಲವೇ ?

ಡಾ॥ ಆರ್. ನಾಗನಗೌಡ.—ಹೌದು.

ಶ್ರೀ ಎಚ್. ಕೆ. ವೀರಣ್ಣಗೌಡ.—ಅಂಥ ಲಿಫ್ಟ್ ಇರಿಗೇಷನ್ ಹೆಚ್ಚಿನ ಅನುಕೂಲವಿರುವ ಮದ್ದೂರು ಮತ್ತು ಚನ್ನಪಟ್ಟಣ ತಾಲ್ಲೂಕುಗಳೆರಡಕ್ಕೂ ಸೇರಿ ಸಾಮಾನ್ಯ 5-6 ನೂರು ಟನ್ ಕಬ್ಬನ್ನು ಅರೆಯುವಂಥ ಒಂದು ಮಿಷನ್‌ಹಾಕಲು ಅವಕಾಶಕೊಡುವುದಕ್ಕೆ ತಮಗೇನು ತೊಂದರೆಯಿದೆ ?

*Srl H. M. CHANNABASAPPA.—During the meeting of the officers *prima facie* we found a case for putting up an economical unit at Maddur. Therefore in the light of the fact that certain disclosures made by the ryots and also by the people living in Maddur Taluk, we were convinced that there is a possibility of putting up a small ecomomical unit. The whole thing is examined and it is not that the Maddur question is closed. The answer discloses that we are just now trying to meet the requirements of the Mandya and Pandavapura factory and find out whether there is a possibility of putting up another factory. This is just deferred but nothing prevents us to speed up matters and see whether it is possible to supply to all the three factories. Government is also of the view that putting up of another factory will certainly go to the economic betterment of the entire area.

District Co-operative Banks (Short Term Credit issued)

Q.—734 Srl G. SIVAPPA (Holalkere).—

Will the Government be pleased to state:—

(*a*) the amount of short term credit loans sanctioned in the State, issued through District Co-operative Banks in each district since their inception each year;

(*b*) whether the collection in each district with regard to the above loans is up to date ?

A.—Dr. R. NAGAN GOWDA (Minister for Industries and Excise).—

(*a*) Rs. 1,29,15,920. For details *vide* Statement appended.

(*b*) The short term loans issued during 1954-55 and 1955-56 have been recovered in full except in a few cases for default in Mysore District owing to distress conditions that prevailed in some parts of the Gundlupet, Chamarajanagar and other places during last year.